CALLING ATTENTION TO A MATTER OF URGENT PUBLIC IMPORTANCE

re : Hardship caused to farmers of Bannur, T. Narasipur Taluk due to stopping of issue of licences for sugarcane crushing.

SRI G. RAJU GOWDA.—Sir, on behalf of Sri K. Made Gowda, I call the attention of the Hon. Chief Minister to the hardship caused to farmers of Bannur, T. Narasipur Taluk due to stopping of issue of licences for sugarcane crushing.

SRI R. GUNDU RAO (Chief Minister).—Sir, I wish to make the following statement.—

1. The Mahadeswara Sahakara Sakkare Karkhane Ltd., was commissioned in the year 1975-76 with a crushing capacity of 1250 TCD. It is stated to start crushing operation in the middle of August. Last year an order was passed by the High Court to the effect that Sugar Cane Crushing Licences may be issued by the Deputy Commissioner to applicants in the area reserved for M/s Mahadeswara Sahakara Sakkare Karkhane Ltd. also keeping in view the provision of providing 95 percent of the Cane available in the area reserved for Sugar Factory as per Rules.

2. Accordingly, action was taken to issue Sugar Cane Crushing Licences by the Deputy Commissioner, Mysore during the month of April, 1980 for a period of 3 months *i.e.*, upto June 30, 1980. Crushing Licence for a period beyond 30th June 1980 were not issued, as it was felt that before considering the applications of Sugar Cane Crushers, the Crushing Capacity of M/s Mahadeswara Sahakara Sakkare Karkhane Ltd., as also the availability of Cane in the Reserved area of the Sugar Factory would have to be fully assessed.

3. The assessment regarding the possible requirements of the Factory will be made this month and then only, depending upon the availability of Sugar Cane and assessing the extent to which Sugar cane will be available for the Crnshers, the Deputy Commissioner will issue Crushing Licences to Sugar Cane Crushers.

4. There is no intention of denial of Crushing Licences so long as the requirements of the sugar factory as contemplated under reservation orders are also met.

5. Since, Bannur in T. Narasipura Taluk also comes within the reserved area of M/s Mahadeswara Sahakara Sakkare Karkhane Ltd., Licences will be issued after assessment of the requirements of the Sugar Factory and the availability of Cane in the reserved area.

ಶ್ರೀ ಜಿ. ರಾಜೂಗೌಡ.—ಈಗ ಮಾನ್ಯ ಮುಖ್ಯ ಮಂತ್ರಿಗಳು ನೀಡಿದ ಹೇಳಿಕೆಯನ್ನು ನಾನು ಕೂಲಂಕುಷವಾಗಿ ಕೇಳಿದೆ. ಈ ಮಹದೇಶ್ವರ ಸಕ್ಕರೆ ಕಾರ್ಖಾನೆ ಆ ಭಾಗದ ಜನರಿಗೆ ವರಪ್ರಧಾನವಾಗಿರ

ಬೇಕಾಗಿತ್ತು. ಆದರೆ ದುರದೃಷ್ಟದಿಂದ ಶಾಪವಾಗಿ ಪರಿಣಮಿಸಿದೆ. ಇದುವರೆಗೆ ಕಬ್ಬನ್ನು ಕಾರ್ಖಾನೆಗೆ ಸರಬರಾಜು ಮಾಡಿದ ರೈತರಿಗೆ ಸಕಾಲಕ್ಕೆ ಹಣ ಪಾವತಿಯಾಗದೆ ತೊಂದರೆಯಾಯಿತು. ಇವತ್ತಿನ ದಿವಸ ಕಾರ್ಖಾನೆ ಮುಚ್ಚಲ್ಪಟ್ಟಿದೆ, ಕೆಲಸ ನಡೆಯುತ್ತಿಲ್ಲ. ಅನೇಕ ರೈತರು ಕಬ್ಬನ್ನು ಬೆಳೆದು ೧೪ ತಿಂಗಳು ಆಗಿದೆ. ಕಾರ್ಖಾನೆಯ ಆಡಳಿತಗಾರರನ್ನು ಕೇಳಿದರೆ ಕಾರ್ಖಾನೆ ನಿಂತಿರುವುದರಿಂದ ಕಬ್ಬನ್ನು ತೆಗೆದು ಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಈಗಾಗಲೇ ಅವಧಿಯಾಗಿರುವ ಕಬ್ಬನ್ನು ಇನ್ನೂ ಬಿಟ್ಟರೆ ಕಬ್ಬಿನಲ್ಲಿರುವ ಸಕ್ಕರೆ ಅಂಶ ಕಡಿಮೆಯಾಗಿ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಈ ಸಂದರ್ಭದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ಬೆಲ್ಲ ಮಾಡಿಕೊಳ್ಳುವುದಕ್ಕಾದರೂ ಪರವಾನಗಿ ಕೊಡಲು ಒಪ್ಪುತ್ತಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ರೈತರು ಕಂಗಾಲಾಗಿದ್ದಾರೆ. ಆದ್ದರಿಂದ, ಅವರ ರಕ್ಷಣೆಗೆ ಸರ್ಕಾರ ಬರಬೇಕು. ಆ ಕಬ್ಬಿನಿಂದ ಬೆಲ್ಲ ಮಾಡಲಿಕ್ಕೆ ಪರವಾನಗಿ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುವುದರ ಜೊತೆಗೆ ಪಂಹದೇಶ್ವರ ಸಕ್ಕರೆ ಕಾರ್ಖಾನೆಯ ವಿಷಯದಲ್ಲಿ ಹೆಚ್ಚಾಗಿ ನಾನು ಈಗ ಪ್ರಸ್ತಾಪ ಮಾಡಬೇಕಾಗಿದೆ. ಆದರೆ ಈಗ ಕಾಲಾವಕಾಶ ಇಲ್ಲದಿರುವುದರಿಂದ ಕೊನೇ ಪಕ್ಷ ಮೈಸೂರು ಜಿಲ್ಲೆಯ ಶಾಸಕರನ್ನು ನಿಮ್ಮ ಕೊಠಡಿಗೆ ಕರೆಸಿ ಚರ್ಚೆ ಮಾಡಿ ಆ ಕಾರ್ಖಾನೆಯನ್ನು ಯಾವ ರೀತಿ ನಡೆಸಬೇಕೆಂಬ ವಿಚಾರದಲ್ಲಿ ಒಂದು ಧ್ಯೇಯ ಧೋರಣೆ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮುಖೇನ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಈ ಮಹದೇಶ್ವರ ಸಕ್ಕರೆ ಕಾರ್ಖಾನೆಯ ಬಗ್ಗೆ ಮಾನ್ಯ ರಾಜೂಗೌಡರು ಹೇಳಿದ ಹಾಗೆ, ಅದರಿಂದ ರೈತರಿಗೆ ಏನು ಸಹಾಯ ಆಗಬೇಕಿತ್ತೋ ಆ ರೀತಿಯಾಗದೆ ಅದು ನಷ್ಟದಲ್ಲಿ ಕೆಲಸ ಮಾಡುತ್ತಿದೆ. ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರುಗಳು ೨೫–೫೦ ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆಂದು ಮನವಿ ಮಾಡಿದ್ದಾರೆ. ತಾವು ಹೇಳಿದ ಹಾಗೆ ಮೈಸೂರು ಜಿಲ್ಲೆಯ ಎಲ್ಲ ಸದಸ್ಯರುಗಳನ್ನು, ಜಿಲ್ಲಾಧಿಕಾರಿಗಳನ್ನು ಹಾಗೂ ವಿಭಾಗಾಧಿಕಾರಿಗಳನ್ನು ಕರೆದು ಚರ್ಚೆ ಮಾಡುತ್ತೇನೆ. ಸರ್ಕಾರ ಏನು ಸಹಾಯ ಮಾಡಬೇಕೆಂದು ಅಭಿಪ್ರಾಯ ಬರುತ್ತದೋ ಅದರಂತೆ ಸರ್ಕಾರದ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಸಹಾಯ ಮಾಡಲಿಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ. ಎಗಡನೆಯದಾಗಿ, ಬೆಲ್ಲ ತಯಾರಿಸುವುದಕ್ಕೆ ಪರವಾನಗಿ ಕೊಡಿ ಎಂದು ಕೇಳುತ್ತಿದ್ದಾರೆ. ಆ ಕಾರ್ಖಾನೆ ಕೆಲಸ ಪ್ರಾರಂಭ ಮಾಡಿದ ಮೇಲೆ ಅದಕ್ಕೆ ಎಷ್ಟು ಕಬ್ಬನ್ನು ಅರೆಯುವ ಸಾಮರ್ಥ್ಯ ಇದೆ ಎಂಬುದನ್ನು ನೋಡಿಕೊಂಡು, ಜಾಸ್ತಿ ಕಬ್ಬು ಬೆಳೆದಿರುವುದು ಕಂಡು ಬಂದರೆ ಬೆಲ್ಲ ಮಾಡುವುದಕ್ಕೆ ಪರವಾನಗಿ ಕೊಡಲು ಸರ್ಕಾರದ ವಿರೋಧವಿಲ್ಲ. ಆದ್ದರಿಂದ, ಅದನ್ನು ಖಂಡಿತ ಪರಿಶೀಲನೆ ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಇದು ಹೈ ಪವರ್ ಕಮಿಟಿಗೆ ಸಂಬಂಧಪಟ್ಟದ್ದು.....

ಅಧ್ಯಕ್ಷರು.—ನಿಮಗೂ ಅದಕ್ಕೂ ಸಂಬಂಧವಿಲ್ಲ, ಯಾರು ನೋಟೀಸ್ ಕೊಟ್ಟಿರುತ್ತಾರೋ ಅವರೇ ಮತ್ತೆ ಸ್ಪಷ್ಟೀಕರಣ ಕೇಳುತ್ತಾರೆ, ಆದ್ದರಿಂದ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಜಿ. ರಾಜೂಗೌಡ.—ಕಾರ್ಖಾನೆ ಇಂತಿಷ್ಟೇ ದಿನಗಳಲ್ಲಿ ಪ್ರಾರಂಭವಾಗುತ್ತದೆಂದು ಗೊತ್ತಿಲ್ಲ. ರೈತರು ಬೆಳೆದ ಕಬ್ಬಿಗೆ ಈಗಾಗಲೇ ೧೪ ತಿಂಗಳು ತುಂಬಿದೆ. ಇನ್ನೂ ನಿಧಾನ ಮಾಡಿದರೆ ಕಬ್ಬಿನಲ್ಲಿರುವ ಸಕ್ಕರೆ ಅಂಶ ಕಡಿಮೆಯಾಗಿ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ, ಅಂಥ ಕಡೆಗಳಲ್ಲಾದರೂ ಬೆಲ್ಲ ಮಾಡಲು ಪರವಾನಗಿ ಕೊಡುವುದಕ್ಕೆ ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅದನ್ನು ವಿಚಾರ ಮಾಡುತ್ತೇನೆ.

MATTER UNDER RULE 312.

re : Injustice done to the SCs/STs allottee of cultivable lands in Bilvardahally near Bannerghatta.

SRI A. LAKSHMISAGAR.—Sir, at the outset, I would like to state that this is a very important matter which requires little more time